

# ಮಗು ಮಂಕಾಗಿದೆಯೇ? ರಕ್ತಹೀನತೆ ಇರಬಹುದು...

ಮಕ್ಕಳಲ್ಲಿ ರಕ್ತಹೀನತೆ ಸಮಸ್ಯೆ ಹೆಚ್ಚಾಗುತ್ತಿದೆ. ಅಪೌಷ್ಟಿಕತೆಯಿಂದ ಬರುವ ಅನೀಮಿಯಾದಿಂದ ಮಕ್ಕಳು ಬೇಗನೆ ಸೊರಗಿದಂತೆ ಕಾಣುತ್ತಾರೆ. ಲವಲವಿಕೆಯಿಂದ ಇರಬೇಕಾದ ಮಕ್ಕಳು ಮಂಕಾಗಿ ಕುಳಿತುಕೊಂಡರೆ ರಕ್ತಹೀನತೆ ಕಾಡುತ್ತಿದೆಯೇ ಎಂಬ ಅನುಮಾನ ಬರಬೇಕು. ಸೂಕ್ತ ಉಪಚಾರದಿಂದ ಈ ಸಮಸ್ಯೆಯಿಂದ ಪಾರಾಗಬಹುದು.



■ ಉಮಾ ಅನಂತ್

ಮನೆಯಲ್ಲಿ ಮಕ್ಕಳು ಓಡಾಡಿಕೊಂಡಿದ್ದರೆ ಹೆತ್ತವರು ಜಗತ್ತನ್ನೇ ಮರೆಯುತ್ತಾರೆ. ಸಂಸಾರ ಆನಂದ ಸಾಗರವಾಗುತ್ತದೆ ಎಂಬ ಮಾತು ಉತ್ಪ್ರೇಕ್ಷೆಯಂತೂ ಅಲ್ಲ. ಮಕ್ಕಳೇ ಹೆತ್ತವರಿಗೆ ಸ್ಫೂರ್ತಿ, ಅವರೇ ಶಕ್ತಿ. ಇಂಥ ಮಕ್ಕಳು ಮಂಕಾಗಿ ಕುಳಿತರೆ, ಆರೋಗ್ಯ ಹದಗೆಡಿಸಿಕೊಂಡರೆ ಪೋಷಕರ ಕೈಕಾಲುಗಳೇ ಓಡುವುದಿಲ್ಲ. ಏನು ಮಾಡಲೂ ನಿರಾಸಕ್ತಿಯಾಗುತ್ತದೆ. ಅದರಲ್ಲೂ ರಕ್ತಹೀನತೆಯಂತಹ ಸಮಸ್ಯೆ ಬಂದರಂತೂ ಜೀವನದಲ್ಲಿ ಶೂನ್ಯವೇ ಆವರಿಸಿದಂತಾಗುತ್ತದೆ, ಈಗೀಗ ಮಕ್ಕಳಲ್ಲಿ ಕಬ್ಬಿಣಾಂಶದ ಕೊರತೆಯಿಂದ ಬರುವ ರಕ್ತಹೀನತೆ (ಅನೀಮಿಯಾ) ಹೆಚ್ಚಾಗುತ್ತಿದೆ. ಇದರಿಂದ ರೋಗನಿರೋಧಕ ಶಕ್ತಿಯೂ ಕುಂದುತ್ತದೆ. ವೈರಾಣು ಸೋಂಕು ಬೇಗನೆ ತಗಲುತ್ತದೆ. ಇದರಿಂದ ಒಟ್ಟಾರೆ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಅನೀಮಿಯಾ ಹೆಚ್ಚುತ್ತಿರುವ ಬಗ್ಗೆ ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಡೆಸಿದ ಅಧ್ಯಯನ ಪ್ರಕಾರ ನಮ್ಮ ದೇಶದಲ್ಲಿ ಗ್ರಾಮೀಣ ಭಾಗದಲ್ಲಿ ಅನೀಮಿಯಾ ಹೆಚ್ಚಾಗುತ್ತಿದೆ. ಇದು ಕಳವಳ ತರುವ ವಿಚಾರ. ನಮ್ಮ ದೇಶದಲ್ಲಿ ಶೇ.59ರಷ್ಟು 12 ವರ್ಷದೊಳಗಿನ ಮಕ್ಕಳು, ಶೇ.54ರಷ್ಟು ಹದಿಹರೆಯದ ಮಕ್ಕಳು, ಶೇ. 50ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿರುವುದು ಸಾಬೀತಾಗಿದೆ. ಇಲ್ಲಿ ಪುರುಷರ ಪ್ರಮಾಣ ಶೇ.23ರಷ್ಟು. ಗರ್ಭಿಣಿಯರು ಹಾಗೂ ಸಂತಾನೋತ್ಪತ್ತಿ ವಯಸ್ಸಿನ ಯುವತಿಯರು ಕೂಡ ಇದೇ ಸಮಸ್ಯೆಯಿಂದ ಪಾಡು ಪಡುತ್ತಿರುವುದನ್ನು ಕೂಡ ಅಧ್ಯಯನ ಸಾಬೀತುಪಡಿಸಿದೆ.

## ರೋಗ ಲಕ್ಷಣಗಳೇನು?

ಮಕ್ಕಳಲ್ಲಿ ವಿಪರೀತ ಸುಸ್ತು, ಚರ್ಮದ ಬಣ್ಣ ಬಿಳಿಚಿಕೊಳ್ಳುವುದು, ಕೂದಲು ಉದುರುವುದು, ಹೃದಯ ಬಡಿತ ಏರುಪೇರು, ಚೈತನ್ಯದ ಕೊರತೆ, ಪದೇ ಪದೇ ಜ್ವರ ಬರುವುದು, ಕೆಲವೊಮ್ಮೆ ಉಸಿರಾಟದ ತೊಂದರೆಯೂ ಕಾಣಿಸಿಕೊಳ್ಳಬಹುದು.